# ಸೆನ್ಸಾರ್ ಅನುರಾಗ!

'ಪಂಜಾಬ್' ಕೊನೆಗೂ ಹಾರಾಡತೊಡಗಿದೆ. ಕೇಂದ್ರ ಸೆನ್ಸಾರ್ ಮಂಡಳಿಯ ಅಧ್ಯಕ್ಷ ಪಹ್ಲಾಜ್ ನಿಹಲಾನಿ ಥಂಡಾ ಹೊಡೆದಿದ್ದಾರೆ. 'ಉಡ್ತಾ ಪಂಜಾಬ್' ಚಿತ್ರದ ನಿರ್ದೇಶಕ ಅನುರಾಗ್ ಸಿಂಗ್ ಕಶ್ಯಪ್ ಈಗ ಬಾಲಿವುಡ್‌ನ ಹೊಸ ಸೂಪರ್‌ಸ್ಟಾರ್. ಸೆನ್ಸಾರ್ ಮಂಡಳಿಯಿಂದ 80ಕ್ಕೂ ಹೆಚ್ಚು ಕಟ್‌ಗಳನ್ನು ಎದುರಿಸಿ ಹೈಕೋರ್ಟ್, ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿ ಕೊನೆಗೆ ಒಂದೇ ಒಂದು ಕಟ್‌ನೊಂದಿಗೆ ಗೆದ್ದು ಬಂದ ಈ ಸಿನಿಮಾ ಬಾಲಿವುಡ್‌ನಲ್ಲಿ ಹೊಸ ಹುರುಪು ಹುಟ್ಟಿಸಿದೆ. ಮೊದಲ ವಾರದ ವರದಿಯಂತೆ ಚಿತ್ರವು, ವಿಮರ್ಶಕ ವಲಯ ಮತ್ತು ಬಾಕ್ಸಾಫೀಸ್ ಎರಡೂ ಕಡೆ ಗೆದ್ದಿದೆ. ಕಳೆದ ಐದಾರು ವರ್ಷಗಳಿಂದ ಬಿಡುವಿಲ್ಲದೆ ದುಡಿಯುತ್ತಿರುವ ನಿರ್ದೇಶಕ ಅನುರಾಗ್ ಕಶ್ಯಪ್, ಈಗ ಇನ್ನಷ್ಟು ಬ್ಯುಸಿ. ಎಲ್ಲ ಮಾಧ್ಯಮಗಳಲ್ಲೂ ಕಶ್ಯಪ್‌ನದ್ದೇ ಸುದ್ದಿ ಸಂಭ್ರಮ.

ಈ ಕಶ್ಯಪ್ ಬದುಕಿನ ಕಥೆಯೂ ಥೇಟ್ ಬಾಲಿವುಡ್ ಸಿನಿಮಾದಂತೆಯೇ ಇದೆ. ಉತ್ತರಪ್ರದೇಶದ ಗೊರಖ್‌ಪುರದಲ್ಲಿ ಹುಟ್ಟಿದ ಅನುರಾಗ್, ಡೆಹ್ರಾಡೂನ್, ಡೆಲ್ಲಿಗಳಲ್ಲಿ ಕಲಿತು ಜೀವಶಾಸ್ತ್ರದ ಪದವಿ ಪಡೆದು ವಿಜ್ಞಾನಿಯಾಗಬೇಕೆಂದು ಕನಸು ಕಂಡವನು. ಆ ಕನಸಿನ ನಡುವೆಯೇ 'ಜನನಾಟ್ಯ ಮಂಚ್' ಸೇರಿ ಬೀದಿನಾಟಕಗಳನ್ನು ಆಡಲು ತೊಡಗಿದ. ಅದೇ ಸಂದರ್ಭದಲ್ಲಿ ಗೆಳೆಯರ ಒತ್ತಾಯದ ಮೇರೆಗೆ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ವಿಟ್ಟೋರಿಯೊ ಡಿ ಸಿಕಾ ನಿರ್ದೇಶಿಸಿದ ಸಿನಿಮಾಗಳನ್ನು ನೋಡಿದ. 'ಬೈಸಿಕಲ್ ಥೀವ್ಸ್' ಈತನಿಗೆ ಎಷ್ಟು ಇಷ್ಟವಾಯಿತೆಂದರೆ, ಎಡೆಬಿಡದೆ ಅಲ್ಲಿ ಹತ್ತು ದಿನಗಳಲ್ಲಿ 55 ಸಿನಿಮಾಗಳನ್ನು ನೋಡಿದ. ವಿಜ್ಞಾನಿಯಾಗಬೇಕೆಂಬ ಕನಸು ಕರಗಿತು. ಐದು ಸಾವಿರ ರೂಪಾಯಿಗಳನ್ನು ಜೇಬಿಗೆ ಹಾಕಿಕೊಂಡು ಮುಂಬೈ ಗಾಡಿ ಹತ್ತಿದ!

ಮುಂಬೈಯಲ್ಲಿ ಐದು ಸಾವಿರ ರೂಪಾಯಿ ಕರಗುವುದಕ್ಕೆ ಹೆಚ್ಚು ದಿನಗಳು ಹಿಡಿಯಲಿಲ್ಲ. ಕೈಖಾಲಿ ಆದಾಗ ಬೀಚ್‌ನಲ್ಲಿ, ವಾಟರ್‌ಟ್ಯಾಂಕ್ ಕೆಳಗೆ ಮಲಗಿ ದಿನಕಳೆದದ್ದೂ ಆಯಿತು. ಕೊನೆಗೆ ಪೃಥ್ವಿ ಥಿಯೇಟರ್‌ನಲ್ಲಿ ಕೆಲಸ ಸಿಕ್ಕಿತು. ದುಡಿಮೆಗೊಂದು ದಾರಿ ಆಯಿತು. ಕಥೆ, ಚಿತ್ರಕಥೆ ಬರೆಯುವ ಗೀಳಿದ್ದ ಅನುರಾಗ್ ಟೀವಿ ಕ್ಷೇತ್ರದಲ್ಲಿ ಅದೃಷ್ಟ ಅರಸತೊಡಗಿದ. ನಿಧಾನಕ್ಕೆ ಮೇಲೇರಿದ. 1997ರಲ್ಲಿ ಬಂದ ಕಭೀ ಕಭೀ ಟೀವಿ ಸೀರಿಯಲ್‌ನಲ್ಲಿ ಈತನ ಚಿತ್ರಕಥೆ ಕ್ಲಿಕ್ ಆಯಿತು. ಕೊನೆಗೊಂದು ದಿನ ಮನೋಜ್ ಬಾಜಪಾಯ್ ಈತನ ಹೆಸರನ್ನು ರಾಮ್‌ಗೋಪಾಲ್ ವರ್ಮಾಗೆ ಸೂಚಿಸಿದಾಗ ಅದೃಷ್ಟದ ಬಾಗಿಲು ಒದ್ದುಕೊಂಡು ತೆರೆಯಿತು. 90ರ ದಶಕದ ಕೊನೆಯಲ್ಲಿ ತೆರೆಗೆ ಬಂದ ಹಿಂದಿ ಸಿನಿಮಾ 'ಸತ್ಯಾ'ಗೆ ಸಹಲೇಖಕನಾಗಿದ್ದು ಮೊದಲ ಯಶಸ್ಸು. ಆ ಸಿನಿಮಾ ಇವತ್ತಿಗೂ ಭಾರತೀಯ ಚಿತ್ರರಂಗದ ಅತ್ಯುತ್ತಮ ಸಿನಿಮಾಗಳಲ್ಲಿ ಒಂದು ಎಂದು ದಾಖಲಾಗಿದೆ. ಆ ಬಳಿಕ ವರ್ಮಾ ನಿರ್ದೇಶನದ 'ಕೌನ್'ಗೆ ಚಿತ್ರಕಥೆ, 'ಶೂಲ್'ಗೆ ಸಂಭಾಷಣೆ ಬರೆದ. ಪ್ರಶಸ್ತಿಗಳೂ ಬಂದವು. ಸ್ವತಃ ನಿರ್ದೇಶನ ಕೈಗೊಂಡ ಬಳಿಕ ಯಶಸ್ಸು ಕೈಗೆಟುಕಿತು. ಬ್ಲ್ಯಾಕ್ ಫ್ರೈಡೇ, ದೇವ್ ಡಿ, ಗುಲಾಲ್, ಗ್ಯಾಂಗ್ಸ್ ಆಫ್ ವಾಸೀಪುರ್, ಬಾಂಬೆ ಟಾಕೀಸ್, ಅಗ್ಲಿ, ಬಾಂಬೆ ವೆಲ್ವೆಟ್ ಹೀಗೆ ಸಾಲು ಸಾಲು ಚಿತ್ರಗಳು ಗೆದ್ದವು. ರಾಷ್ಟ್ರ, ಅಂತರರಾಷ್ಟ್ರೀಯ ಪ್ರಶಸ್ತಿಗಳು ಮುಡಿಗೇರಿದವು.

ಅನುರಾಗ್‌ನ ವೃತ್ತಿ ಜೀವನದಲ್ಲಿ ಕೆಲವು ದಾಖಲೆಗಳು ತಮಾಷೆಯಾಗಿವೆ. ಈತ ನಿರ್ದೇಶಿಸಿದ ಮೊದಲ ಚಿತ್ರ 'ಪಾಂಚ್' ಈಗಲೂ ಬಿಡುಗಡೆ ಕಾಣದೆ ಡಬ್ಬಾದಲ್ಲಿದೆ. ಅದಕ್ಕೆ ಸೆನ್ಸಾರ್ ಕಾಟವೇ ಕಾರಣ. ಈತ ಪ್ರಥ್ವಿ ಥಿಯೇಟರ್ ಸೇರಿದ ಬಳಿಕ ನಟಿಸಿದ ಮೊದಲ ನಾಟಕ ಪ್ರದರ್ಶನವನ್ನೇ ಕಾಣಲಿಲ್ಲ. ಅದಕ್ಕೆ ನಿರ್ದೇಶಕ ಸತ್ತದ್ದು ಕಾರಣ! ಮೊತ್ತಮೊದಲು ತಿದ್ದಿ ಬರೆದ ಕಥೆಯ ಟೀವಿ ಸೀರಿಯಲ್, 'ಅಟೊ ನಾರಾಯಣ್' ಕೂಡಾ ಈವರೆಗೆ ಬಿಡುಗಡೆ ಆಗಿಲ್ಲ! 1997ರಲ್ಲಿ ಈತ ಮೊತ್ತಮೊದಲು ಚಿತ್ರಕಥೆ ಬರೆದ ಹನ್ಸಲ್ ಮೆಹ್ತಾ ನಿರ್ದೇಶನದ 'ಜಯತೆ' ಚಿತ್ರ ಕೂಡಾ ಈವರೆಗೆ ಬಿಡುಗಡೆ ಆಗಿಲ್ಲ!

ಸೆನ್ಸಾರ್ ಜತೆಗೆ ಅನುರಾಗ್ ಜಗಳಕ್ಕೂ ಹಳೆಯ ಇತಿಹಾಸವಿದೆ. ಮೊದಲ ನಿರ್ದೇಶನದ 'ಪಾಂಚ್' ಸೆನ್ಸಾರ್‌ನಿಂದ ಮುಕ್ತಿ ಪಡೆಯಲಿಲ್ಲ. ಮುಂಬೈ ಸ್ಫೋಟದ ಕಥೆ ಇಟ್ಟುಕೊಂಡು ನಿರ್ದೇಶಿಸಿದ 'ಬ್ಲ್ಯಾಕ್ ಫ್ರೈಡೇ' ಸೆನ್ಸಾರ್ ಆಕ್ಷೇಪದಿಂದ ಎರಡು ವರ್ಷ ತಡವಾಗಿ ತೆರೆ ಕಂಡಿತು. ಈಗ 'ಉಡ್ತಾ ಪಂಜಾಬ್' ಮತ್ತೆ ಸೆನ್ಸಾರ್ ಮಂಡಳಿ ವಿರುದ್ಧ ಗೆದ್ದು ಸುದ್ದಿ ಮಾಡಿದೆ.

43ರ ಹರೆಯದ ಅನುರಾಗ್ 'ನೋ ಸ್ಮೋಕಿಂಗ್' ಎಂಬ ಸಿನಿಮಾ ಮಾಡಿದ್ದು ಬಾಕ್ಸಾಫೀಸ್‌ನಲ್ಲಿ ಕೋಟಿಗಟ್ಟಳೆ ನಷ್ಟ ಉಂಟು ಮಾಡಿತ್ತು. ಆದರೆ ಅದರಿಂದ ಆತನಿಗೆ ನಿರ್ಮಾಪಕರ ಕೊರತೆ ಕಾಡಲಿಲ್ಲ. ಏಕೆಂದರೆ ಸದಾ ಹೊಸತನದ ಕಥೆಯನ್ನು ಹೊಸ ಶೈಲಿಯಲ್ಲಿ ಹೇಳುವ ಈತನ ತುಡಿತ ಎಲ್ಲರ ಗಮನ ಸೆಳೆದಿತ್ತು. ಆ ಬಳಿಕ ಚಿತ್ರಸಾಹಿತಿ, ನಿರ್ದೇಶಕ, ನಿರ್ಮಾಪಕ, ಸಂಕಲನಕಾರ ಮಾತ್ರವಲ್ಲ ನಟನಾಗಿಯೂ ಈತ ದುಡಿದಿರುವುದು ವಿಶೇಷ. ಬ್ಲ್ಯಾಕ್‌ಫ್ರೈಡೇ, ಗುಲಾಲ್, ಭೂತನಾಥ್ ರಿಟರ್ನ್ಸ್, ಹ್ಯಾಪಿ ನ್ಯೂ ಇಯರ್ ಚಿತ್ರಗಳಲ್ಲಿ ವಿಶಿಷ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ ಅನುರಾಗ್, 2011ರಲ್ಲಿ ಶಾಗಿರ್ದ್ ಎಂಬ ಚಿತ್ರದಲ್ಲಿ ಪೂರ್ಣ ನಾಯಕನಾಗಿ ನಟಿಸಿದ್ದ. ಈತನ ಸೋದರ ಅಭಿನವ್ ಕೂಡಾ ನಿರ್ಮಾಪಕ. ತಂಗಿ ಅನುಭೂತಿ ಕಶ್ಯಪ್ ಈತನ ಬಹುತೇಕ ಚಿತ್ರಗಳ ಸಹನಿರ್ದೇಶಕಿ.

ಆರತಿ ಬಜಾಜ್‌ರನ್ನು 2003ರಲ್ಲಿ ಮದುವೆಯಾಗಿದ್ದ ಅನುರಾಗ್ 2009ರಲ್ಲಿ ಡೈವೋರ್ಸ್ ಮಾಡಿದ. ಬಾಲಿವುಡ್ ನಟಿ ಕಲ್ಕಿ ಕೋಚ್ಲಿನ್‌ಳನ್ನು 2011ರಲ್ಲಿ ಮದುವೆಯಾಗಿ 2015ರಲ್ಲಿ ಡೈವೋರ್ಸ್ ಮಾಡಿದ. ಬಾಲಿವುಡ್‌ನ ಗಾಸಿಪ್ ಕಾಲಂನಲ್ಲಿ ಇತ್ತೀಚೆಗೆ ಈತನ ಹೆಸರು ಹಲವು ನಟಿಯರ ಜತೆಗೆ ಕೇಳಿಬರುತ್ತಿರುವುದೂ ಸುಳ್ಳಲ್ಲ. ಅದೇನೇ ಇದ್ದರೂ ಈಗ ಸೆನ್ಸಾರ್ ಮಂಡಳಿ ವಿರುದ್ಧ ಈತ ನಡೆಸಿರುವ ಕಾಳಗಕ್ಕೆ ಬಾಲಿವುಡ್‌ನಲ್ಲಿ ಸಾಕಷ್ಟು ಜನರ ಬೆಂಬಲ ಸಿಕ್ಕಿದೆ. 'ಶ್ಯಾಮ್ ಬೆನಗಲ್ ಸಮಿತಿ ನೀಡಲಿರುವ ಎರಡನೇ ವರದಿ ಬಂದರೆ ಸೆನ್ಸಾರ್ ಮಂಡಳಿಯ ಮಾರ್ಗದರ್ಶಿ ಸೂತ್ರಗಳು ಸಾಕಷ್ಟು ಬದಲಾಗಬಹುದು' ಎನ್ನುವುದು ಈತನ ಸ್ಪಷ್ಟ ಅಭಿಮತ. ಹಾಗಾದಲ್ಲಿ ಅದರ ಕೀರ್ತಿಯಲ್ಲಿ ದೊಡ್ಡ ಪಾಲು ಈತನಿಗೇ ದಕ್ಕಿದಂತಾಗುತ್ತದೆ.



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65